# ಆಹಾ ಸುದ್ದಿ!

★ ಸಸಿತೋಟ




ಚೀನಾದ ಶೆಂಝೆಂಗ್ ನಗರದ ಸಾರ್ವಜನಿಕ ಮೂತ್ರಾಲಯಗಳಲ್ಲಿ ಅಡ್ಡಾದಿಡ್ಡಿ ಮೂತ್ರ ಮಾಡಿ ಗಲೀಜು ಮಾಡಿದರೆ ದಂಡ ವಿಧಿಸಲಾಗುವುದಂತೆ. ಅದಕ್ಕೆಂದೇ ಮಾ ಝಿಯಾನ್‌ಝಿಂಗ್ ಎಂಬಾತ 'ನೇರ ಮೂತ್ರ ಮಾಡಿರಿ' ಎಂಬ ವಿಚಿತ್ರ ಉಪಕರಣವನ್ನೇ ಹೊರತಂದು ಒಂದೂವರೆ ಡಾಲರ್‌ಗೆ ಮಾರಾಟ ಮಾಡುತ್ತಿದ್ದಾನೆ. ಗುರಿ ತಪ್ಪುವಿರಾದರೆ ನಿಮ್ಮ ನೆರವಿಗೆ ಬರುತ್ತದೆ ಈ ಉಪಕರಣ. ಈ ಉಪಕರಣ 'ಇಣುಕು ವೀರ'ರಿಂದಲೂ ರಕ್ಷಿಸಬಹುದು.

ಕ್ಲೀವ್‌ಲ್ಯಾಂಡ್‌ನ ಈ 'ಶತಮೂರ್ಖ'ನನ್ನು ಯಾರೂ ಹಾಗೆಂದು ಕರೆದಿಲ್ಲ. ಆದರೆ ಆತನೇ 'ನಾನು ಶತಮೂರ್ಖ. ಇನ್ನೆಂದೂ ಹೀಗೆ ಮಾಡಲಾರೆ' ಎಂಬ ಬೋರ್ಡ್ ತಗುಲಿಸಿಕೊಂಡು ಒಂದು ಇಡೀ ದಿನ ರಸ್ತೆಯ ಚೌಕದಲ್ಲಿ ನಿಂತ. ಆತ ರಿಚರ್ಡ್. ಪೊಲೀಸರಿಗೆ ಕರೆ ಮಾಡಿ ಹೆದರಿಸಿದ. ಅಷ್ಟೇ ಆದರೆ ಕೇವಲ ಮೂರ್ಖ ಹೇಗಾಗುತ್ತಿದ್ದ? ಕೋರ್ಟ್‌ಗೆ ಹಾಜರಾಗುವುದನ್ನೂ ತಪ್ಪಿಸಿದ್ದಕ್ಕೆ 'ಬಸ್ ಸಿಗಲಿಲ್ಲ' ಎಂದು ನೆಪ ಹೇಳಿ ಶತಮೂರ್ಖನಾದ. ಗೂಂಡಾಗಿರಿ ಮಾಡಿದರೂ ಸುಳ್ಳು ಹೇಳಬಾರದು ಎಂಬುದು ಬೋರ್ಡ್ ತಗುಲಿಸಿಕೊಂಡಾಗ ರಿಚರ್ಡ್‌ಗೆ ಜ್ಞಾನೋದಯವಾಗಿರಬಹುದು.

ಇವು ಸ್ವಿಝರ್ಲೆಂಡ್‌ನ ಡ್ರೈವ್- ಇನ್ ಸೆಕ್ಸ್ ಬಾಕ್ಸ್‌ಗಳು. ಕಾರಿನಲ್ಲಿ ಒಂಟಿಯಾಗಿ ಬರುವ ಪುರುಷರಿಗೆಂದು ಲೈಂಗಿಕ ಕಾರ್ಯಕರ್ತೆಯರು ಕಾದಿರುವ ಈ ಬಾಕ್ಸ್‌ಗಳನ್ನು ಅಲ್ಲಿಯ ಸರ್ಕಾರವೇ ರೂಪಿಸಿದೆಯಂತೆ. ವಾರ್ಷಿಕ 3.9 ಶತಕೋಟಿ ಡಾಲರ್‌ನ ಈ ವಹಿವಾಟನ್ನು ಇನ್ನಷ್ಟು ಲಾಭದಾಯಕಗೊಳಿಸುವ ಸರ್ಕಾರದ ಈ ಕ್ರಮದಿಂದ ತೆರಿಗೆದಾರರು ಮಾತ್ರ ಸಿಟ್ಟಿಗೆದ್ದಿದ್ದಾರಂತೆ. ಅಲ್ಲಿಗೆ ಭೇಟಿ ನೀಡುವವರೂ ತೆರಿಗೆದಾರರಲ್ಲವೇ?



ಈತ ಕ್ಯಾಲಿಫೋರ್ನಿಯಾದ ಲಿಯೊ ಅಲಿಯಾಸ್ ಬೆಕ್ಕು- ನಾಯಿ- ಕುದುರೆ ಮನುಷ್ಯ. 35 ವರ್ಷಗಳ ಹಿಂದೆ, ಸಾಕಿ ಬೀದಿಯಲ್ಲಿ ಬಿಟ್ಟ ಪ್ರಾಣಿಗಳನ್ನು ಸೇರಿಸಿಕೊಂಡು ಶುರು ಮಾಡಿದ ಕೇಂದ್ರದಲ್ಲಿ ಈಗ 1500ಕ್ಕೂ ಅಧಿಕ ಪ್ರಾಣಿಗಳಿವೆಯಂತೆ. ಅಮೆರಿಕದಲ್ಲಿ ತಂದೆ- ತಾಯಿಯನ್ನೂ ಸಾಕಿ ಆಚೆ ಹಾಕುವ ಸಂಪ್ರದಾಯ ಈಗ ಲಿಯೊ ತಲೆ ತಿನ್ನುತ್ತಿದ್ದು, ಅದಕ್ಕಾಗಿ ಕೇಂದ್ರದಲ್ಲಿ ವಿಭಾಗ ಶುರು ಮಾಡುವ ಆಲೋಚನೆ ಇದೆಯಂತೆ. ಕೇಂದ್ರದ ವಿವಿಧ ವಿಭಾಗಗಳ ನಿವಾಸಿಗಳು ಹೊಡೆದಾಡಿಕೊಂಡರೆ ಏನು ಮಾಡುತ್ತಾನೋ ಈ ಲಿಯೊ!



ಸೌದಿ ಅರೇಬಿಯಾದ ಡೂಬಾ ನಗರದಲ್ಲಿ ಕಾರುಗಳ ಮೇಲೆ ಕಲ್ಲು ಶೇಖರಿಸುವುದು ಒಂದು ಹವ್ಯಾಸವಂತೆ. ಕಲ್ಲುಗಳ ಮೇಲೆ ಕಾರನ್ನು ನಿಲ್ಲಿಸುವುದೂ ಒಂದು ಹೊಸ ಕಲೆಯಂತೆ. ಅದೇನು ಮಹಾ! ಕಲ್ಲು, ಹೊಂಡಗಳಿಂದ ತುಂಬಿದ ರಸ್ತೆಯ ಮೇಲೆ ನಮ್ಮ ದೇಶದ ಜನ ಕಾರನ್ನೇ ಓಡಿಸುವುದೂ ಒಂದು ಕಲೆಯಲ್ಲವೇ!

ಬ್ರಿಟನ್ನಿನ ಮಹಿಳೆ ಕ್ಲೇರ್ ವಜ್ರದ ಉಂಗುರಕ್ಕಾಗಿ ಇನ್ನೂ ಎಂಟು ವರ್ಷ ಕಾಯುತ್ತಾಳಂತೆ. ಅದು ತಯಾರಾಗುವವರೆಗೆ ಅಲ್ಲ, ತಯಾರಾಗಿದ್ದ ಉಂಗುರವನ್ನು ನುಂಗಿದ ಕೋಳಿ ಸಾಯುವವರೆಗೆ. ಆಕೆಯ ಪ್ರೀತಿಯ ಸಾಕು ಕೋಳಿ ಸಾರಾ ಕ್ಲೇರಿಯ ಗೆಳೆಯ ಕೊಟ್ಟ ವಜ್ರದ ಉಂಗುರವನ್ನು ಆಕೆಯ ಬೆರಳಿಂದ ಕಿತ್ತು ನುಂಗಿಬಿಟ್ಟಿದೆಯಂತೆ. ಅದು ಜಠರದೊಳಗೆ ಸಿಕ್ಕಿ ಹಾಕಿಕೊಂಡಿದ್ದು, ಶಸ್ತ್ರ ಚಿಕಿತ್ಸೆ ಮಾಡಿದರೆ ಕೋಳಿ ಸತ್ತು ಹೋಗುವ ಸಾಧ್ಯತೆ ಇರುವುದರಿಂದ ಅದಕ್ಕೆ ನೈಸರ್ಗಿಕ ಸಾವೇ ಬರಬೇಕಂತೆ. ಕೋಳಿ ಕದ್ದರೆ ಈಗ ಲಕ್ಷಾಂತರ ರೂಪಾಯಿ ಲಾಭ. ಯಾವ ಕಳ್ಳನಿಗೆ ಅದೃಷ್ಟ ಕಾದಿದೆಯೋ!

